ಕುಶಾಲನಗರ ಯೋಜನಾ ಪ್ರಾಧಿಕಾರ ಕುಶಾಲನಗರ

ಕಾವೇರಿ ಬಡಾವಣೆ, ನಿ.ಸಂ.05, ಬ್ಲಾಕ್ ನಂ.01, ಕುಶಾಲನಗರ – 571234

Email Id: kushalnagaradtp@hotmail.com ದೂರವಾಣಿ ಸಂ: 08276–274040

ಸಂಖ್ಯೆ:ಕುಯೋಪ್ರಾ/ಪ್ರಾ.ಸಭೆ/48/2021–22 ದಿನಾಂಕ:

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ.ಎಂ.ಎಂ. ಚರಣ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 30–03–2022 ರ ಬುಧವಾರದಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ 48ನೇ ಸಾಮಾನ್ಯ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು :–

1) ಶ್ರೀ ಎಂ.ಎಂ. ಚರಣ್, ಅಧ್ಯಕ್ಷರು
2) ಸದಸ್ಯ ಕಾರ್ಯದರ್ಶಿ
3) ಶ್ರೀ ವೈಶಾಖ್, ನಾಮನಿರ್ದೇಶಿತ ಸದಸ್ಯರು.
4) ಶ್ರೀ ಪಂಡರೀಕಾಕ್ಷ, ನಾಮನಿರ್ದೇಶಿತ ಸದಸ್ಯರು
5) ಶ್ರೀ ಮಧುಸೂಧನ್, ನಾಮನಿರ್ದೇಶಿತ ಸದಸ್ಯರು
6) ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು

ಗೈರುಹಾಜರಾದವರು :–

1) ಮುಖ್ಯಾಧಿಕಾರಿಗಳು
   ಪಟ್ಟಣ ಪಂಚಾಯಿತಿ, ಕುಶಾಲನಗರ
2) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಮುಳ್ಳುಸೋಗೆ ಗ್ರಾಮ ಪಂಚಾಯಿತಿ
3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಕೂಡುಮಂಗಳೂರು ಗ್ರಾಮ ಪಂಚಾಯಿತಿ
4) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
   ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ

ವಿಷಯ ಸಂಖ್ಯೆ:– 1):– ದಿನಾಂಕ: 05–02–2022 ರಂದು ನಡೆದ 47ನೇ ಯೋಜನಾ ಪ್ರಾಧಿಕಾರದ ಸಾಮಾನ್ಯ ಸಭೆಯ ನಡವಳಿಗಳನ್ನು ಸ್ಥಿರೀಕರಿಸಿರುವ ಬಗ್ಗೆ.

ಟಿಪ್ಪಣಿ : ದಿನಾಂಕ: 05–02–2022 ರಂದು ನಡೆದ 47ನೇ ಪ್ರಾಧಿಕಾರದ ಸಭೆಯ ನಡವಳಿಗಳನ್ನು ಓದಿ ಒಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ:– :– ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಪ್ರತಿಯೊಂದು ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ:– 2):– ಪ್ರಾಧಿಕಾರದ ಖಾತೆಗೆ ಫೆಬ್ರವರಿ 2022 ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರದ ಬಗ್ಗೆ ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ : ಫೆಬ್ರವರಿ 2022 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದ್ದು, ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ

ನಿರ್ಣಯ:– ಫೆಬ್ರವರಿ 2022 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ಪು.ತಿ.ನೋ

ವಿಷಯ ಸಂಖ್ಯೆ: 03 – ಕುಶಾಲನಗರ ಯೋಜನಾ ಪ್ರಾಧಿಕಾರದ 2022–23ನೇ ಸಾಲಿನ ಆಯವ್ಯಯ ಅಂದಾಜಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ 2022–23 ನೇ ಸಾಲಿನ ಆಯವ್ಯಯ ಅಂದಾಜನ್ನು ಸರ್ಕಾರದ ಆದೇಶದ ರೀತ್ಯಾ ತಯಾರಿಸಿದ್ದು, ಪ್ರಾಧಿಕಾರದ ಸಭೆಯ ಅನುಮೋದನೆಗಾಗಿ ಆಯವ್ಯಯವನ್ನು ಮಂಡಿಸಿದೆ.

ನಿರ್ಣಯ:– ಕುಶಾಲನಗರ ಯೋಜನಾ ಪ್ರಾಧಿಕಾರದ 2022–23 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಪ್ರಾಧಿಕಾರದ ಸಭೆಯು ಪರಿಶೀಲಿಸಿ ಚರ್ಚಿಸಿತು ಹಾಗೂ ಆಯವ್ಯಯ ಅಂದಾಜುಗಳನ್ನು ಸಭೆಯು ಅಂಗೀಕರಿಸಿತು ಹಾಗೂ ಅನುಮೋದನೆಗಾಗಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ: 04 – ಕುಶಾಲನಗರ ಪಟ್ಟಣದ ತಾವರೆಕೆರೆ ಸಮೀಪದಲ್ಲಿ ರಾಷ್ಟ್ರೀಯ ಹೆದ್ದಾರಿ ಮೈಸೂರು ರಸ್ತೆಗೆ ಹೊಂದಿಕೊಂಡಂತೆ ಮೇ. ಎಸ್.ಎಲ್.ಎನ್ ಪ್ರಾಪರ್ಟಿಸ್ ಇವರು ನಿರ್ಮಿಸುತ್ತಿರುವ Housing/Villa Laout ಸಂಬಂಧಿಸಿದಂತೆ ಶ್ರೀ ಅಮೃತೇಶ್ ಎನ್.ಪಿ ವಕೀಲರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇವರು ತಕರಾರು ಅರ್ಜಿ ಸಲ್ಲಿಸಿರುವ ಕುರಿತು.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ ಮೇ॥ ಎಸ್.ಎಲ್.ಎನ್ ಪ್ರಾಪರ್ಟಿಸ್ ಇವರು ಕುಶಾಲನಗರದಲ್ಲಿ ನಿರ್ಮಿಸುತ್ತಿರುವ ಬಡಾವಣೆ ಸಂಬಂಧಿಸಿದಂತೆ ಶ್ರೀ ಅಮೃತೇಶ್ ಎನ್.ಪಿ ವಕೀಲರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇವರು ತಕರಾರು ಅರ್ಜಿ ಪತ್ರ ಬರೆದಿದ್ದು, ಈ ಹಿಂದೆ ಸದರಿಯವರು ಪ್ರಾಧಿಕಾರಕ್ಕೆ ಬರೆದಿರುವ ಪತ್ರಗಳ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಹಲವಾರು ನಿರ್ಣಯಗಳನ್ನು ತೆಗೆದುಕೊಂಡಿರುವುದನ್ನು ಶ್ಲಾಘಿಸಿರುತ್ತಾರೆ ಹಾಗೂ ಎಸ್.ಎಲ್.ಎನ್ ಪ್ರಾಪರ್ಟಿಸ್ ಇವರು ನಿರ್ಮಿಸುತ್ತಿರುವ ಲೇಔಟ್‌ಗೆ ಪ್ರಾಧಿಕಾರದಿಂದ ಕೊಟ್ಟಂತಹ ಪತ್ರಗಳು ಹಾಗೂ ಸಲಹೆ ಅತ್ಯಂತ ಸಮಂಜಸವಾಗಿರುವುದಾಗಿ ತಿಳಿಸುತ್ತಾ, ಕೆಲವೊಂದು ಸಂದರ್ಭದಲ್ಲಿ ಎಸ್.ಎಲ್.ಎನ್ ಪ್ರಾಪರ್ಟಿಸ್ ರವರಿಗೆ ಸದ್ಯ ಇರುವ ಕಾನೂನು ಕಟ್ಟಳೆಗಳನ್ನು ಸಡಿಲಿಸಿ ಅವರಿಗೆ ಬೇಕಾದ ಹಾಗೆ ಅನುಕೂಲ ಮಾಡಿಕೊಡುತ್ತಿರುವುದು ಆಡಳಿತದಲ್ಲಿ ಸಂಶಯ–ಭ್ರಷ್ಟಾಚಾರ–ಶಾಮೀಲತ್ವವು ಕಾಣುತ್ತಿರುವುದಾಗಿ ದೂರುತ್ತಾ, ಕೆಲವು ಅಂಶಗಳ ಬಗ್ಗೆ ಗಮನಕ್ಕೆ ತರಬಯಸಿ ಪತ್ರ ಬರೆದಿರುತ್ತಾರೆ. ಸದರಿಯವರು ದೂರಿರುವ ಅಂಶಗಳು ಈ ಕೆಳಕಂಡಂತೆ ಇರುತ್ತದೆ,

1. ನಾನು ಮೇಲ್ಕಂಡ Housing/villa layout ಸಂಬಂಧಪಟ್ಟಂತೆ ಆಕ್ಷೇಪಣಾ ಪತ್ರದ ಮೇರೆಗೆ ತಮ್ಮ ಕಛೇರಿಯಿಂದ ಸದರಿ ಎಸ್.ಎಲ್.ಎನ್ ಪ್ರಾಪರ್ಟಿಸ್‌ನವರಿಗೆ ನೋಟೀಸನ್ನು ಜಾರಿ ಮಾಡಿದ್ದು ತದನಂತರ ಅವರು ಕೊಟ್ಟಂತಹ ಉತ್ತರ ಪತ್ರವನ್ನು ಇದುವರೆಗೂ ತಾವು ಬಹಿರಂಗಗೊಳಿಸಿರುವುದಿಲ್ಲ ಹಾಗೆಯೇ ಅದರ ಪತ್ರಿಯನ್ನು ನನಗೆ ಕಳುಹಿಸಿರುವುದಿಲ್ಲ, ಸದರಿಯವರು ಕಳುಹಿಸಿದ ಪತ್ರವನ್ನು ನಿಗೂಢವಾಗಿ ಇಡಲು ಕಾರಣವೇನು, ದಯವಿಟ್ಟು ಆ ಪತ್ರದ ನಕಲನ್ನು ನನಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.
2. ಎಸ್.ಎಲ್.ಎನ್ ಪ್ರಾಪರ್ಟಿಸ್‌ಗೆ ಸಂಬಂಧಪಟ್ಟಂತೆ ತಮ್ಮ ಯೋಜನಾ ಪ್ರಾಧಿಕಾರದಲ್ಲಿ ದಿನಾಂಕ: 27–05–2016 ರಂದು ಅನುಮೋದನೆ ಕೊಟ್ಟಿದ್ದಾಗ್ಯೂ ಅದರಲ್ಲಿದ್ದ ಷರತ್ತಿನ ಪ್ರಕಾರ 2 ವರ್ಷಗಳೊಳಗೆ ಸದರಿ ಜಮೀನನ್ನು ಅಭಿವೃದ್ಧಿಪಡಿಸಬೇಕೆಂದು ಇದ್ದರೂ 27–05–2018 ರವರೆಗೂ ಯಾವುದೇ ರೀತಿಯಾದಂತಹ ಅಭಿವೃದ್ಧಿ ಕಾರ್ಯ ಸಮಾಪ್ತಿಗೊಳಿಸಿರುವುದಿಲ್ಲ. ಹಾಗೆಯೇ ಸದರಿ ಸ್ಥಳದ ಅಭಿವೃದ್ಧಿಪಡಿಸಲು ಶ್ರೀ ಅರ್ಜುನ್ ಬಾಲಸುಬ್ರಮಣ್ಯಂ ಎಂಬುವವರು ಸಲ್ಲಿಸಿದ್ದು ತಾ. 27–05–2018 ರಲ್ಲಿ ಕಾಯ್ದೆಬದ್ಧವಾಗಿ ಮುಕ್ತಾಯಗೊಂಡಿರುತ್ತದೆ.
3. ಈ ಮಧ್ಯದಲ್ಲಿ ಎನ್. ವಿಶ್ವನಾಥ್ ಮತ್ತು ಎನ್. ವಿಶಾಲಾಕ್ಷಿ ಎಂಬುವವರು ಹೊಸದಾಗಿ ಬಡಾವಣೆಯ ಅಭಿವೃದ್ಧಿಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸದೆ, ಮತ್ತೊಬ್ಬರ ಅರ್ಜಿಯನ್ನೇ ತಮ್ಮಗಳ ಅರ್ಜಿ ಎಂದು ತಿಳಿದುಕೊಂಡು ನವೀರಣಕ್ಕಾಗಿ ಮತ್ತು ಕೆಲವೊಂದು ಬದಲಾವಣೆಗಳನ್ನು

ಪು.ತಿ.ನೋ

ಮಾಡಿಕೊಂಡು ಅರ್ಜಿ ಸಲ್ಲಿಸಿರುತ್ತಾರೆ. ಇದು ಕಾನೂನು ರೀತಿಯಲ್ಲಿ ಘೋರ ಅಪರಾಧವಾಗಿರುವುದಲ್ಲದೆ ಅಕ್ರಮವಾಗಿರುತ್ತದೆ. ಆದಾಗ್ಯೂ ಪ್ರಾಧಿಕಾರವು ಇದನ್ನು ಗಮನಿಸದೆ ಒಂದು ರೀತಿ ಸದರಿಯವರೊಡನೆ ಶಾಮೀಲಾಗಿ 28–04–2017 ರಲ್ಲಿ ಮತ್ತೊಮ್ಮೆ ಅನುಮೋದನೆ ಕೊಟ್ಟಿರುವುದು ಕಂಡುಬಂದಿರುತ್ತದೆ. ಸದರಿ ಅನುಮೋದನೆಯ ಸಮಯದಲ್ಲಿಯೂ ಸಹ 2 ವರ್ಷಗಳೊಳಗೆ (27–04–2019) ಕಾರ್ಯ ಮುಕ್ತಾಯವಾಗಬೇಕೆಂದು ತಿಳಿಸಿರುತ್ತೀರಿ. ಆದರೆ ಇದುವರೆಗೂ ಯಾವುದೇ ಅಭಿವೃದ್ಧಿ ಕಾರ್ಯವು ನಡೆಯದೆ ಕೇವಲ ಸದರಿ ಸ್ಥಳಕ್ಕೆ ಮಣ್ಣನ್ನು ತುಂಬುವ ಕಾರ್ಯ ನಡೆದಿದ್ದು, ಸದರಿ ಸ್ಥಳದಲ್ಲಿ ಯಾವುದೇ ರೀತಿಯಾದಂತಹ ಕೆಲಸ ಪರಿಪೂರ್ಣವಾಗಿರುವುದಿಲ್ಲ. ಆದ್ದರಿಂದ ತಾವು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕೊಟ್ಟಂತಹ ಅನುಮೋದನೆಯನ್ನು ತನ್ನದೇ ಅಂತ್ಯ ಕಂಡುಕೊಂಡಿರುತ್ತದೆ.

4. ಈ ಮೇಲಿನ ವಿಷಯ ಪ್ರಾಧಿಕಾರಕ್ಕೆ ತಿಳಿದಿದ್ದರೂ ಸಹ, ಪದೇ ಪದೇ ಅದರಲ್ಲೂ ನನ್ನ ಮೊದಲನೆಯ ಪತ್ರದಲ್ಲಿ ತಿಳಿಸಿದಂತೆ ಹಳ್ಳ ಗದ್ದೆಗಳಿಗೆ ಮಣ್ಣನ್ನು ತುಂಬಿ ಆ ಸ್ಥಳವನ್ನು ವಾಣಿಜ್ಯ ವ್ಯಾಪಾರಕ್ಕಾಗಿ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸುವಂತಹ ದುಸ್ಸಾಹಸಕ್ಕೆ ಕೈಹಾಕಿರುವುದು ಮುಂದೆ ಆಗುವಂತಹ ಘೋರ ದುರಂತಕ್ಕೆ ಅಡಿಪಾಯ ಹಾಕಿದಂತಾಗುತ್ತದೆ. ಈಗಾಗಲೇ ಈ ರೀತಿಯಾಗಿ ಮಣ್ಣನ್ನು ತುಂಬಿದಂತಹ ಸ್ಥಳದಲ್ಲಿ ಮನೆಗಳನ್ನು ವಾಣಿಜ್ಯ ಸಂಕೀರ್ಣಗಳನ್ನು ಕಟ್ಟಿದಂತಹವು 4–5 ವರ್ಷಗಳಲ್ಲಿ ಕಟ್ಟಡಗಳು ಒಂದು ಕಡೆ ವಾಲಿಕೊಳ್ಳುವುದು, ಕಟ್ಟಡಗಳು ಬೀಳುವುದು ಎಲ್ಲರಿಗೂ ತಿಳಿದಂತಹ ವಿಷಯವಲ್ಲದೆ ಹಲವಾರು ಪತ್ರಿಕೆಗಳಲ್ಲಿ ಚಿತ್ರಸಹಿತ ವರದಿಯಾಗಿರುತ್ತದೆ.

5. ತಮ್ಮಗಳ ಪತ್ರದಲ್ಲಿ ದಿನಾಂಕ: 28–01–2022 ರಂದು ತಿಳಿಸಿರುವಂತೆ 24–12–2021 ರಂದು ಜರುಗಿದ ಪ್ರಾಧಿಕಾರದ ಸಭೆಯ ನಡವಳಿಯ ಪ್ರಕಾರ ಮೇಲ್ಕಂಡ ಎಸ್.ಎಲ್.ಎನ್. ಪ್ರಾಪರ್ಟಿಸ್ ಇವರಿಗೆ ಕೃತಕವಾಗಿ ಮಣ್ಣು ತುಂಬಿಸುತ್ತಿರುವ ಬಗ್ಗೆ ಕಡ್ಡಾಯವಾಗಿ ಮಣ್ಣು ಪರೀಕ್ಷೆ ಮತ್ತು Pile foundation ಅಳವಡಿಸಿಕೊಳ್ಳುವ ಬಗ್ಗೆ ಖರೀದಿದಾರರ ಗಮನಕ್ಕೆ ತರುವ ಸಂಬಂಧ ಜಮೀನಿನ ಮಾಲೀಕರಿಗೆ ಜಮೀನಿನಲ್ಲಿ ಸೂಚನಾ ಫಲಕ ಅಳವಡಿಸುವಂತೆ ಸೂಚಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿರುತ್ತೀರಿ.

6. ತಾ. 24–12–2021 ರಂದು ತಮ್ಮ ಪ್ರಾಧಿಕಾರದ ನಿರ್ಣಯವು ಎಷ್ಟೊಂದು ಅಸ್ಪಷ್ಟವಾಗಿದೆ ಎಂದರೆ, ಎಸ್.ಎಲ್. ಎನ್. ಪ್ರಾಪರ್ಟಿಸ್ ರವರಿಗೆ ಪರೋಕ್ಷವಾಗಿ ನಿವೇಶನಗಳನ್ನು ಮಾರಾಟ ಮಾಡಲು ಅನುಮತಿ ಕೊಟ್ಟಂತೆ, ಹಾಗೆಯೇ ನಿವೇಶನ ಖರೀದಿದಾರರಿಗೆ ಸದರಿ ನಿವೇಶನದಲ್ಲಿ ಕಟ್ಟಡ ಕಟ್ಟುವ ಮೊದಲು Pile foundation ಅಳವಡಿಸಿಕೊಂಡೇ ಕಟ್ಟಡವನ್ನು ಕಟ್ಟಬೇಕೆಂದು ತಿಳಿಸಬೇಕೆಂದು ನಿರ್ಣಯಿಸಿರುತ್ತೀರಿ, ಆದರೆ ನಿಜವಾದ ಅರ್ಥದಲ್ಲಿ Pile foundation ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿರುತ್ತದೆ. Pile foundation ನ್ನು ಅಳವಡಿಸಿಕೊಳ್ಳುವುದು ಕೇವಲ ನದಿಗಳಿಗೆ ಸೇತುವೆಗಳನ್ನು ಕಟ್ಟುವ ಸಂದರ್ಭದಲ್ಲಿ, ಅತ್ಯಂತ ಅವಶ್ಯಕವಾಗಿ ಸಮುದ್ರದಲ್ಲಿ ಬಂದರುಗಳನ್ನು ಕಟ್ಟುವ ಸಂದರ್ಭದಲ್ಲಿ ಮತ್ತು ಕಾಲುವೆಗಳನ್ನು ಸರಿಪಡಿಸುವಂತಹ ಸಂದರ್ಭದಲ್ಲಿ ಉಪಯೋಗಿಸಬೇಕೆ ಹೊರತು ಹಳ್ಳ ಗದ್ದೆಗಳಿಗೆ ಸಾವಿರಾರು ಟ್ರಕ್ ಮಣ್ಣನ್ನು ತುಂಬಿಸಿ, ಮೇಲ್ಪದಿಯಲ್ಲಿ ಮನೆ ಕಟ್ಟುವ ರೀತಿಯಲ್ಲಿ ಸಮತಟ್ಟು ಮಾಡಿ, ಮಾರಾಟ ಮಾಡಿದಂತಹ ನಿವೇಶನಗಳಿಗೆ Pile foundation ಅಳವಡಿಸಿಕೊಳ್ಳುವ ದುಸ್ಸಾಹಸಕ್ಕೆ ಪ್ರಾಧಿಕಾರವು ಒತ್ತು ಕೊಡುವುದು ಕೇವಲ ಈ ಲೇಔಟ್ ಮಾಲೀಕರಿಗೆ ನೇರವಾಗಿ ಸಹಾಯ ಮಾಡಿದಂತೆ ಕಾಣುತ್ತದೆ. (ದಯವಿಟ್ಟು ಇದರ ಬಗ್ಗೆ ಗೂಗಲ್ ತಂತ್ರಾಂಶದಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಿ).

7. ಈಗಾಗಲೇ ಪ್ರಾಧಿಕಾರದಿಂದ ಕೊಟ್ಟಂತಹ ಅವಧಿ ಮುಗಿದಿದ್ದರೂ ಸಹ ಲೇಔಟ್ ಅಭಿವೃದ್ಧಿ ಆಗದಿದ್ದರೂ ಇನ್ನೂ ಲೇಔಟ್‌ನ್ನು ಅಭಿವೃದ್ಧಿಪಡಿಸಲು, ಕಾಮಗಾರಿಯನ್ನು ನಡೆಸಲು ಬಿಟ್ಟಿರುವುದೇ

ಪ್ರಾಧಿಕಾರದ ತಪ್ಪು ಧೋರಣೆಯನ್ನು ಎತ್ತಿ ತೋರಿಸುತ್ತದೆ. ಇದಲ್ಲದೆ ಪ್ರಾಧಿಕಾರಕ್ಕೆ ಚೆಸ್ಕಾಂ, ಪರಿಸರ ಇಲಾಖೆಯಿಂದ ಅನುಮತಿ, ರಾಷ್ಟ್ರೀಯ ಪ್ರಾಧಿಕಾರದಿಂದ ಅನುಮತಿ ಮತ್ತು ಕಾವೇರಿ ನೀರಾವರಿ ನಿಗಮದಿಂದ ಅನುಮತಿ ಹಾಗೂ ಇತರ ಇಲಾಖೆಗಳಿಂದ ಅನುಮತಿಯ ಪತ್ರಗಳು ಇದುವರೆಗೂ ಸದರಿಯವರು ಪಡೆದಿರುವುದಿಲ್ಲ. ಇದಕ್ಕೆ ಸಾಕ್ಷಿಭೂತವಾಗಿ ತಮ್ಮ ಪ್ರಾಧಿಕಾರದಿಂದಲೇ ನನಗೆ ಕಳುಹಿಸಿರುವ ಪತ್ರದಲ್ಲಿ ಪರಿಸರ ಇಲಾಖೆಯ ಅನುಮತಿ ಪತ್ರ ಇರುವುದಿಲ್ಲ. ಕಾವೇರಿ ನೀರಾವರಿ ನಿಗಮದಿಂದ ಅನುಮತಿ ಇರುವುದಿಲ್ಲ. ಇತರ ಇಲಾಖೆಗಳ ಯಾವುದೇ ಅನುಮತಿಯನ್ನು ಪಡೆದಿರುವುದಿಲ್ಲವೆಂದು ತಿಳಿಸಿರುತ್ತೀರಿ. ಕಡತದ ಸಂಪೂರ್ಣ ದಾಖಲೆಯನ್ನು ಮಾಹಿತಿ ಹಕ್ಕಿನ ಪ್ರಕಾರ ಎಲ್ಲವನ್ನೂ ನನಗೆ ಕಳುಹಿಸಿರುತ್ತೀರಿ. ಆದ್ದರಿಂದ ಎಸ್.ಎಲ್.ಎನ್. ಪ್ರಾಪರ್ಟಿಸ್ ರವರು ಯಾವುದೇ ಕಾರಣದಿಂದಲೂ ಸದರಿ ಸ್ಥಳದಲ್ಲಿ Housing/villa layout ಅಭಿವೃದ್ಧಿ ಕಾರ್ಯಾಚರಣೆಯು ಕಾನೂನಿಗೆ ವಿರುದ್ದವಾಗಿರುತ್ತದೆ. ಅದ್ದರಿಂದ ಸದರಿ ಕೆಲಸವನ್ನು ತಕ್ಷಣ ನಿಲ್ಲಸಬೇಕೆಂದು ಕೇಳಿಕೊಳ್ಳುತ್ತೇನೆ

ತಪ್ಪಿದಲ್ಲಿ, ಪ್ರಾಧಿಕಾರ– ಪ್ರಾಧಿಕಾರದ ಸದಸ್ಯರನ್ನು ಮೊದಲನೆಯ ಸ್ಥಾನದಲ್ಲಿ ಹಾಗೂ ಕುಶಾಲನಗರ ಪಟ್ಟಣ ಪಂಚಾಯಿತಿ, ಮಾನ್ಯ ಜಿಲ್ಲಾಧಿಕಾರಿಗಳು, ಮಾನ್ಯ ಕಂದಾಯ ಇಲಾಖೆ ಎಲ್ಲರನ್ನೂ ಜವಾಬ್ದಾರರೆಂದು ಆಗಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯನ್ನು ದಾಖಲಿಸುತ್ತೇನೆಂದು ಈ ಮೂಲಕ ತಮ್ಮಗಳ ಗಮನಕ್ಕೆ ತರಲು ಬಯಸುತ್ತೇನೆ ಎಂಬುದಾಗಿ ತಕರಾರು ಅರ್ಜಿಯಲ್ಲಿ ತಿಳಿಸಿರುತ್ತಾರೆ.

<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u> ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಅಮೃತೇಶ್ ಎನ್.ಪಿ ವಕೀಲರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಇವರು ನೀಡಿರುವ ದೂರು ಪತ್ರವನ್ನು ಪರಿಶೀಲಿಸಿದ್ದು, ಕ್ರಮ ಸಂಖ್ಯೆ 1 ರಲ್ಲಿ ದೂರುದಾರರು ತಿಳಿಸಿರುವಂತೆ ಈ ಕಛೇರಿಯಿಂದ ಜಮೀನಿನ ಮಾಲೀಕರಿಗೆ ನೋಟೀಸ್ ನೀಡಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಮಾಲೀಕರು ಉತ್ತರವನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಸದರಿ ಉತ್ತರ ಪತ್ರವನ್ನು ದಿನಾಂಕ: 24–12–2021 ರಂದು ನಡೆದ ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ ಹಾಗಾಗಿ ದೂರುದಾರರು ತಿಳಿಸಿರುವಂತೆ ಸದರಿ ಪತ್ರವನ್ನು ಬಹಿರಂಗಗೊಳಿಸಿರುವುದಿಲ್ಲ ಹಾಗೂ ನಿಗೂಢವಾಗಿ ಇರಿಸಲಾಗಿದೆ ಎಂಬುದು ನಿಜವಾಗಿರುವುದಿಲ್ಲ ಹಾಗೂ ದೂರುದಾರರು ಸದರಿ ಉತ್ತರ ಪತ್ರದ ಪ್ರತಿಯನ್ನು ನೀಡುವಂತೆ ಕೋರಿ ಈ ಹಿಂದೆ ಈ ಕಛೇರಿಗೆ ಮನವಿಯನ್ನು ಸಲ್ಲಿಸಿರುವುದಿಲ್ಲ. ಪ್ರಸ್ತುತ ತಕರಾರು ಅರ್ಜಿಯಲ್ಲಿ ಸದರಿ ಪತ್ರದ ನಕಲು ನೀಡುವಂತೆ ಕೋರಿದ್ದು, ಪತ್ರದ ಪ್ರತಿಯನ್ನು ದೂರುದಾರರಿಗೆ ಕಳುಹಿಸಲಾಗಿದೆ.

ಕ್ರಮ ಸಂಖ್ಯೆ 2 ರ ಬಗ್ಗೆ ಪರಿಶೀಲಿಸಲಾಗಿ, ದೂರುದಾರರು ತಿಳಿಸಿದಂತೆ ದಿನಾಂಕ: 27–05–2016 ರಲ್ಲಿ ಪ್ರಾಧಿಕಾರದಿಂದ ಎಸ್.ಎಲ್.ಎನ್. ಪ್ರಾಪರ್ಟಿಸ್ ಗೆ ಸಂಬಂಧಪಟ್ಟಂತೆ ಯಾವುದೇ ಅನುಮೋದನೆ ನೀಡಿರುವುದಿಲ್ಲ. ಸದರಿ ದಿನಾಂಕದಂದು ಶ್ರೀ ಅರ್ಜುನ್ ಬಾಲಸುಬ್ರಮಣ್ಯಂ ರವರು ಕಂದಾಯ ಇಲಾಖೆಯಿಂದ ಭೂ–ಪರಿವರ್ತನಾ ಆದೇಶವನ್ನು ಪಡೆದಿರುವುದಾಗಿರುತ್ತದೆ. ಹಾಗಾಗಿ ದೂರುದಾರರು ತಿಳಿಸಿದಂತೆ ಪ್ರಾಧಿಕಾರದಿಂದ ದಿನಾಂಕ: 27–05–2016 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ ಎಂಬುದು ಸಮಜಂಸವಾಗಿರುವುದಿಲ್ಲ.

ಕ್ರಮ ಸಂಖ್ಯೆ 3 ರ ಬಗ್ಗೆ ಪರಿಶೀಲಿಸಲಾಗಿ, ದಿನಾಂಕ: 27–05–2016 ರಂದು ಶ್ರೀ ಅರ್ಜುನ್ ಬಾಲಸುಬ್ರಮಣ್ಯಂ ಇವರು ಭೂ–ಪರಿವರ್ತಿಸಿಕೊಂಡಿರುವ ಜಮೀನನ್ನು ದಿನಾಂಕ: 17–06–2016 ರಲ್ಲಿ ಶ್ರೀ ಎನ್. ವಿಶ್ವನಾಥನ್ ಮತ್ತು ಶ್ರೀಮತಿ ವಿ. ವಿಶಾಲಾಕ್ಷಿ ಇವರುಗಳು ಖರೀದಿಸಿದ್ದು ತದನಂತರ ಸರಿಯವರು ತಮ್ಮ ಹೆಸರಿನಲ್ಲಿ ವಿನ್ಯಾಸ ಅನುಮೋದನೆಗೆ ಅರ್ಜಿಯನ್ನು ಪಟ್ಟಣ ಪಂಚಾಯಿತಿ ಕುಶಾಲನಗರ ಮುಖಾಂತರ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ದೂರುದಾರರು ಎನ್. ವಿಶ್ವನಾಥನ್ ಮತ್ತು ವಿಶಾಲಾಕ್ಷಿ ಇವರು ಮತ್ತೊಬ್ಬರ ಅರ್ಜಿಯನ್ನೇ ತಮ್ಮಗಳ ಅರ್ಜಿ ಎಂದು ತಿಳಿದುಕೊಂಡು ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ನಮೂದಿಸಿರುವುದು ತಾಳೆಯಾಗುವುದಿಲ್ಲ. ಶ್ರೀ ಎನ್. ವಿಶ್ವನಾಥನ್ ಮತ್ತು ಶ್ರೀಮತಿ ವಿ. ವಿಶಾಲಾಕ್ಷಿ ಇವರುಗಳು ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಪ್ರಾಧಿಕಾರದಿಂದ ದಿನಾಂಕ: 28–04–2017 ರಲ್ಲಿ ವಿನ್ಯಾಸ

ನಕ್ಷೆಗೆ ಅನುಮೋದನೆ ನೀಡಿರುವುದು ಕಂಡುಬಂದಿದೆ ಹಾಗೂ 2 ವರ್ಷ ಅವಧಿ ಮುಗಿಯುವ ಪೂರ್ವದಲ್ಲಿಯೇ ಶ್ರೀ ಎನ್. ವಿಶ್ವನಾಥನ್ ಮತ್ತು ವಿ. ವಿಶಾಲಾಕ್ಷಿ ಇವರು ದಿನಾಂಕ: 31–10–2018 ರಂದು ಪರಿಷ್ಕೃತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿ ಪಟ್ಟಣ ಪಂಚಾಯಿತಿ ಕುಶಾಲನಗರ ಮುಖಾಂತರ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಆ ಪ್ರಕಾರ ದಿನಾಂಕ: 28–04–2017 ರಲ್ಲಿ ನೀಡಿದ ಅನುಮೋದನೆಯನ್ನು ರದ್ದುಪಡಿಸಿ ಪರಿಷ್ಕೃತ ವಿನ್ಯಾಸ ನಕ್ಷೆಗೆ ದಿನಾಂಕ: 23–04–2019 ರಲ್ಲಿ ಅನುಮೋದನೆ ನೀಡಿರುವುದು ಕಂಡುಬಂದಿದೆ. ಸದರಿ ಆದೇಶದಲ್ಲಿ ಎರಡು ವರ್ಷದೊಳಗೆ ಅಭಿವೃದ್ಧಿ ಕಾರ್ಯ ಮುಗಿಸುಂತೆ ಷರತು ವಿಧಿಸಲಾಗಿರುತ್ತದೆ ಆದರೆ ಜಮೀನಿನ ಮಾಲೀಕರು ಬಡಾವಣೆಯನ್ನು ಸಂಪೂರ್ಣ ಅಭಿವೃದ್ಧಿಪಡಿಸಿರುವುದಿಲ್ಲ.

ಕ್ರಮ ಸಂಖ್ಯೆ 4, 5, 6 ರ ಬಗ್ಗೆ ಪರಿಶೀಲಿಸಲಾಗಿ, ದೂರು ಅರ್ಜಿದಾರರು ತಿಳಿಸಿದಂತೆ ಕಟ್ಟಡಗಳು ವಾಲಿಕೊಳ್ಳುವುದು, ಬೀಳುವಂತಹ ಪ್ರಕರಣಗಳು ವಿವಿಧ ಸಂದರ್ಭದಲ್ಲಿ Depends on the soil, ಕಟ್ಟಡದ ತಳಪಾಯ ಹಾಗೂ ನಿರ್ಮಾಣದ ವಿಧ ಹಾಗೂ ನಿರ್ಮಿಸಲು ಬಳಸುವ ಸಾಮಾಗ್ರಿ ಮತ್ತು ತಾಂತ್ರಿಕತೆಯ ಮೇಲೆ ಅವಲಂಬಿತವಾಗಿದ್ದು ದೂರುದಾರರ ಆಕ್ಷೇಪಣೆಯನ್ನು ತಳ್ಳಿಹಾಕುವಂತಿಲ್ಲ. ಹಾಗಾಗಿ ದಿನಾಂಕ: 24–12–2021 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿ ಪ್ರಸ್ತುತ ಯಗದಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಕಟ್ಟಡ ನಿರ್ಮಿಸಲು ಅವಕಾಶವಿರುವುದರಿಂದ ಮಣ್ಣು ಪರೀಕ್ಷೆ ಮಾಡಿಸಿ Pile foundation ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಸೂಚಿಸಲು ಪ್ರಾಧಿಕಾರದ ಸಭೆಯು ನಿರ್ಣಯಿಸಿತು.

ಕ್ರಮ ಸಂಖ್ಯೆ 7 ರ ಬಗ್ಗೆ ಪರಿಶೀಲಿಸಲಾಗಿ, ಜಮೀನಿನ ಮಾಲೀಕರು ಸಂಬಂಧಪಟ್ಟ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿರುವುದಿಲ್ಲವಾದ್ದರಿಂದ ಹಾಗೂ ಈ ಕಛೇರಿಯಿಂದ ದಿನಾಂಕ: 23–04–2019 ರಂದು ನೀಡಿರುವ ಪರಿಷ್ಕೃತ ವಿನ್ಯಾಸ ನಕ್ಷೆಯನ್ನು ಷರತ್ತು ವಿಧಿಸಿದಂತೆ ಜಮೀನಿನ ಮಾಲೀಕರು ಎರಡು ವರ್ಷದೊಳಗೆ ಸಂಪೂರ್ಣ ಅಭಿವೃದ್ಧಿಪಡಿಸದೇ ಇರುವುದರಿಂದ ಹಾಗೂ ಅನುಮೋದನೆ ಅವಧಿ ಮುಗಿದಿರುವುದರಿಂದ ಅಭಿವೃದ್ಧಿ ಕಾರ್ಯವನ್ನು ಸ್ಥಗಿತಗೊಳಿಸುವಂತೆ ಸೂಚಿಸಬಹುದಾಗಿದ್ದು, ತಕರಾರು ಅರ್ಜಿಯಲ್ಲಿನ ಅಂಶಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ನಿರ್ಣಯ ಕೈಗೊಳ್ಳಲು ತಕರಾರು ಪತ್ರವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

<u>ನಿರ್ಣಯ:</u> ದೂರುದಾರರು ಸಲ್ಲಿಸಿರುವ ತಕರಾರು ಅರ್ಜಿಯನ್ನು ಸಭೆಯಲ್ಲಿ ಮಂಡಿಸಲಾಗಿ ದೂರುದಾರರು ಕ್ರಮ ಸಂಖ್ಯೆ 1 ರಿಂದ 7 ರವರೆಗೆ ನಮೂದಿಸಿರುವ ಅಂಶಗಳನ್ನು ಸಭೆಯು ಪರಿಶೀಲಿಸಿ ಕೂಲಂಕುಷವಾಗಿ ಚರ್ಚಿಸಿತು. ಜಮೀನಿನ ಮಾಲೀಕರು ಕಛೇರಿಗೆ ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ದೂರುದಾರರು ಪಡೆದುಕೊಂಡಿದ್ದರು ಸಹ ಸದರಿ ದಾಖಲೆಗಳನ್ನು ಸರಿಯಾಗಿ ಪರಿಶಿಲಿಸಿಕೊಳ್ಳದೇ ದೂರುದಾರರು ತಮ್ಮ ಅರ್ಜಿಯಲ್ಲಿ ನಮೂದಿಸಿರುವ ಅಂಶಗಳಲ್ಲಿ ಪ್ರಾಧಿಕಾರದ ಮೇಲೆ ಆರೋಪ ಮಾಡಿರುವುದರಲ್ಲಿ ಅರ್ಥವಿರುವುದಿಲ್ಲ ಎಂಬುದಾಗಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು. ಜಮೀನಿನ ಮಾಲೀಕರು ದಿನಾಂಕ: 28–04–2017 ರಂದು ವಾಣಿಜ್ಯ ವಿನ್ಯಾಸಕ್ಕೆ ಅನುಮೋದನೆ ಪಡೆದಿರುವಂತೆ ಬಡಾವಣೆಯನ್ನು ಭಾಗಶ: ಅಭಿವೃದ್ಧಿಪಡಿಸಿರುವುದಾಗಿ ಸದಸ್ಯರು ಸಭೆಗೆ ತಿಳಿಸಿದರು. ತದನಂತರ ವಿನ್ಯಾಸದ ಅವಧಿ ಮುಗಿಯುವ ಪೂರ್ವದಲ್ಲಿಯೇ ಪರಿಷ್ಕೃತ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದಿರುವುದನ್ನು ಸಭೆಯು ಗಮನಿಸಿತು. ಪ್ರಸ್ತುತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆಯುತ್ತಿರುವುದಿಲ್ಲ ಎಂಬುದಾಗಿ ಸಭೆಯಲ್ಲಿ ಚರ್ಚೆಯಾಯಿತು. ಅನುಮೋದಿತ ವಿನ್ಯಾಸದ ಷರತ್ತಿನಂತೆ ಎರಡು ವರ್ಷಗಳ ಅವಧಿ ಮುಗಿದಿರುವುದರಿಂದ ಯಾವುದೇ ರೀತಿ ಅಭಿವೃದ್ಧಿ ಕಾರ್ಯ ಮುಂದುವರೆಸದಂತೆ ಜಮೀನಿನ ಮಾಲೀಕರಿಗೆ ನೋಟೀಸು ನೀಡುವಂತೆ ಹಾಗೂ ಪ್ರಾಧಿಕಾರದಿಂದ ನಿವೇಶನಗಳು ಬಿಡುಗಡೆ ಮಾಡಿಲ್ಲವಾದ್ದರಿಂದ ಮತ್ತು ವಾಣಿಜ್ಯ ಭೂ–ಪರಿವರ್ತಿತ ಜಮೀನಿನಲ್ಲಿ ದೂರದಾರರ ಆಕ್ಷೇಪಣೆಯಂತೆ Housing/Villa Laout ಉದ್ದೇಶಕ್ಕೆ

ಅನುಮೋದನೆಗೆ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲವಾದ್ದರಿಂದ ಹಾಗೂ ಪರಿಷ್ಕೃತ ವಿನ್ಯಾಸ ನಕ್ಷೆಗೆ ಜಮೀನಿನ ಮಾಲೀಕರು ಪ್ರಸ್ತಾವನೆ ಸಲ್ಲಿಸದೇ ಇರುವುದರಿಂದ ದೂರುದಾರರ ಆಕ್ಷೇಪಣೆಯನ್ನು ದಾಖಲಿಸಿಕೊಳ್ಳಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

ವಿಷಯ ಸಂಖ್ಯೆ: 05 – ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ, ಸ.ನಂ. 107, 108, 103, 103/1, 103/2, 103/3 (ಚಿಕ್ಕಣ್ಣ ಬಡಾವಣೆ) ಯಲ್ಲಿ ತೆನಿಪಾಂಡೆಯನ್ ಎಲ್.ಪಿ.ಜಿ. ಇಂಪೋರ್ಟ್ ಟರ್ಮಿನಲ್(ಪ್ರೈ) ಲಿ. ನಾಮಕ್ಕಲ್ ತಮಿಳುನಾಡು ಇವರು ವಾಣಿಜ್ಯ ಕಟ್ಟಡ (Auto LPG station) ನಿರ್ಮಿಸಲು ಅನುಮೋದನೆ ಕೋರಿರುವ ಬಗ್ಗೆ

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ತೆನಿಪಾಂಡೆಯನ್ ಎಲ್.ಪಿ.ಜಿ. ಇಂಪೋರ್ಟ್ ಟರ್ಮಿನಲ್(ಪ್ರೈ) ಲಿ. ಇವರು ಈ ಕಛೇರಿಗೆ ಪತ್ರ ಬರೆದಿದ್ದು, ಮುಳ್ಳುಸೋಗೆ ಗ್ರಾಮದ 107, 108, 103, 103/1, 103/2, 103/3 ರಲ್ಲಿ Auto LPG station ಸ್ಥಾಪಿಸಲು ಕಟ್ಟಡ ಪರವಾನಿಗೆಗೆ ಕೋರಿದ್ದು, ಈ ಹಿಂದೆ ಸದರಿ ನಿವೇಶನದಲ್ಲಿ Auto LPG station ಸ್ಥಾಪಿಸುವ ಉದ್ದೇಶಕ್ಕೆ ಯೋಜನಾ ಪ್ರಾಧಿಕಾರದಿಂದ ಜಿಲ್ಲಾಧಿಕಾರಿಗಳಿಗೆ ನಿರಾಕ್ಷೇಪಣಾ ಪತ್ರ ನೀಡಲಾಗಿದ್ದು, ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಎಲ್ಲಾ ಇಲಾಖೆಗಳ ನಿರಾಕ್ಷೇಪಣಾ ಪತ್ರ ಪಡೆದು Auto LPG station ಸ್ಥಾಪಿಸಲು ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 268 ಮೈಅಪ್ರಾ 2014 ಬೆಂಗಳೂರು ದಿನಾಂಕ: 16–12–2019 ರಲ್ಲಿ **"**Any Filling Station only for two and three wheeler for which land requirement is 18m x 15m can be installed in Residential and Industrial Zone**"** ಎಂಬುದಾಗಿ ಇದ್ದು ನಾವು ಸ್ಥಾಪಿಸಲು ಉದ್ದೇಶಿಸಿರುವ Auto LPG station ಆಟೋ (ಮೂರು ಚಕ್ರದ ವಾಹನ) ಗಳಿಗೆ ಮಾತ್ರ ಸಂಬಂಧಿಸಿರುವುದಾಗಿರುವುದರಿಂದ ಹಾಗೂ ಸರ್ಕಾರದ ಮೇಲ್ಕಂಡ ಸುತ್ತೋಲೆಯ ಎಲ್ಲಾ ಮಾನದಂಡಗಳಿಗೆ ಮಿತಿಯಲ್ಲಿರುತ್ತದೆ ಮತ್ತು ಈಗಾಗಲೇ ಮಾನ್ಯ ಜಿಲ್ಲಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ನಿರಾಕ್ಷೇಪಣಾ ಪತ್ರ ನೀಡಿರುವುದರಿಂದ ಹಾಗೂ ಈಗಾಗಲೇ Petroleum and Safety Organisation (PESO) Nagpur ದಿಂದ ಆರಂಭಿಕ ಅನುಮೋದನೆ ಪಡೆದಿದ್ದು, ಪೋಲೀಸ್ ಇಲಾಖೆ, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ, ಪಂಚಾಯಿತಿ, ಆರೋಗ್ಯ ಇಲಾಖೆ, ಕಂದಾಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಈಗಾಗಲೇ ಪಡೆದಿದ್ದರು ಸಹ ಕೆಲವರು ವ್ಯಾಪಾರದ ಪೈಪೋಟಿಯಿಂದಾಗಿ ನಮ್ಮ ವ್ಯವಹಾರವನ್ನು ಸ್ಥಾಪಿಸಲು ಅಡ್ಡಿಪಡಿಸುತ್ತಿರುವುದಾಗಿ ಹಾಗೂ ಸದರಿ ವ್ಯಕ್ತಿಯು ಸಂಬಂಧಪಟ್ಟ ಇಲಾಖೆಗಳಿಗೆ ದಾರಿ ತಪ್ಪಿಸಿ ನಮ್ಮ ವ್ಯವಹಾರವನ್ನು ನಿಲ್ಲಿಸಲು ಪ್ರಯತ್ನಿಸುತ್ತಿರುತ್ತಾರೆ ಹಾಗಾಗಿ ಮೇಲ್ಕಂಡ ಜಮೀನಿನಲ್ಲಿ Auto LPG station ಅನ್ನು ಸ್ಥಾಪಿಸಲು ಕಟ್ಟಡ ಪರವಾನಿಗೆ ನೀಡಬೇಕೆಂದು ಕೋರಿರುತ್ತಾರೆ. ಕಡತವನ್ನು ಸಭೆಗೆ ಮಂಡಿಸಿದೆ.

ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ: ಮುಳ್ಳುಸೋಗೆ ಗ್ರಾಮದ 107, 108, 103, 103/1, 103/2, 103/3 ರಲ್ಲಿನ ನಿವೇಶನವು ಶ್ರೀ ಡಿ.ಸಿ. ಜಗದೀಶ್ ಇವರ ಮಾಲೀಕತ್ವದಲ್ಲಿದ್ದು, ತೆನಿಪಾಂಡೆಯನ್ ಎಲ್.ಪಿ.ಜಿ. ಇಂಪೋರ್ಟ್ ಟರ್ಮಿನಲ್(ಪ್ರೈ) ಲಿ. ಸಂಸ್ಥೆಯು ಇವರ ನಿವೇಶನದಲ್ಲಿ Auto LPG station ಸ್ಥಾಪಿಸಲು ಉದ್ದೇಶ ಹೊಂದಿರುವುದಾಗಿದ್ದು, ಈ ಬಗ್ಗೆ ಕಟ್ಟಡ ಪರವಾನಿಗೆಗೆ ತಾಂತ್ರಿಕ ಅಭಿಪ್ರಾಯ ಕೋರಿ ಪಟ್ಟಣ ಪಂಚಾಯಿತಿ, ಕುಶಾಲನಗರ ಇವರು ನಿರ್ಮಾಣ್ 2.0 ತಂತ್ರಾಂಶದ ಮೂಲಕ ಪ್ರಸ್ತಾವನೆಯನ್ನು ಈ ಹಿಂದೆ ಸಲ್ಲಿಸಿದ್ದು, ಸದರಿ ವಿಷಯವನ್ನು ದಿನಾಂಕ: 02–07–2021 ರಲ್ಲಿ ಪ್ರಾಧಿಕಾರದ ಸಭೆ ವಿಷಯ ಸಂಖ್ಯೆ (9) ರಲ್ಲಿ ಸಭೆಗೆ ಮಂಡಿಸಲಾಗಿ, ವಿಷಯದ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆದು ವಸತಿ ಉದ್ದೇಶಕ್ಕೆ ಅನುಮೋದನೆಗೊಂಡಿರುವ ವಿನ್ಯಾಸದಲ್ಲಿನ ನಿವೇಶನದಲ್ಲಿ Auto LPG Dispenser service station ಅನ್ನು ಸ್ಥಾಪಿಸಲು ಅನುಮತಿಸುವುದು ಅನುಮೋದನೆಗೊಂಡಿರುವ ಮೂಲ ವಿನ್ಯಾಸದ ಉದ್ದೇಶಕ್ಕೆ ವ್ಯತಿರಿಕ್ತವಾಗುವುದರಿಂದ

ಪು.ತಿ.ನೋ

ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗುವುದರಿಂದ ಪ್ರಸ್ತಾವನೆಯನ್ನು ತಿರಸ್ಕರಿಸಲು ಹಾಗೂ ಪ್ರಾಧಿಕಾರವು ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರ ಮಾರ್ಗದರ್ಶನ ಕೋರಿ ಪತ್ರ ಬರೆಯುವಂತೆ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಆ ಪ್ರಕಾರ ಮಾರ್ಗದರ್ಶನ ಕೋರಿ ಪತ್ರ ಬರೆಯಲಾಗಿದ್ದು, ಈವರೆಗೆ ಸದರಿಯವರು ಮಾರ್ಗದರ್ಶನವನ್ನು ನೀಡಿರುವುದಿಲ್ಲ ಹಾಗಾಗಿ ಮಾರ್ಗದರ್ಶನ ಕೋರಿ ಮತ್ತೊಮ್ಮೆ ಪತ್ರ ಬರೆಯಬಹುದಾಗಿದ್ದು ಕಡತವನ್ನು ಸಭೆಯ ಚರ್ಚೆಗೆ ಮಂಡಿಸಿದೆ.

ನಿರ್ಣಯ:– ವಿಷಯದ ಬಗ್ಗೆ ಚರ್ಚಿಸಿದ ಸಭೆಯು ದಿನಾಂಕ: 02–07–2021 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ವಸತಿ ಉದ್ದೇಶಕ್ಕೆ ಅನುಮೋದನೆಗೊಂಡಿರುವ ವಿನ್ಯಾಸದಲ್ಲಿನ ನಿವೇಶನದಲ್ಲಿ Auto LPG Dispenser service station ಅನ್ನು ಸ್ಥಾಪಿಸಲು ಅನುಮತಿಸುವುದು ಅನುಮೋದನೆಗೊಂಡಿರುವ ಮೂಲ ವಿನ್ಯಾಸದ ಉದ್ದೇಶಕ್ಕೆ ವ್ಯತಿರಿಕ್ತವಾಗುವುದರಿಂದ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗುವುದರಿಂದ ಪ್ರಸ್ತಾವನೆಯನ್ನು ತಿರಸ್ಕರಿಸಲು ನಿರ್ಣಯಿಸಲಾಗಿತ್ತು. ಆದರೆ ಅರ್ಜಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದ ಹಾಗೂ ಜಿಲ್ಲಾಧಿಕಾರಿಗಳಿಂದ ಈಗಾಗಲೇ ನಿರಾಕ್ಷೇಪಣಾ ಪತ್ರ ಪಡೆದಿರುವುದರಿಂದ ಹಾಗೂ ಯೋಜನಾ ಪ್ರಾಧಿಕಾರದಿಂದ ಜಿಲ್ಲಾಧಿಕಾರಿಗಳಿಗೆ Auto LPG station ಸ್ಥಾಪಿಸುವ ಉದ್ದೇಶಕ್ಕೆ ನಿರಾಕ್ಷೇಪಣಾ ಪತ್ರ ನೀಡಿರುವುದರಿಂದ Auto LPG station ಸ್ಥಾಪಿಸಲು ಅನುಮತಿಸುವಂತೆ ಸದಸ್ಯರು ಸಭೆಗೆ ತಿಳಿಸಿದರು. ಸದಸ್ಯ ಕಾರ್ಯದರ್ಶಿಯವರು ಮಾತನಾಡಿ ವಸತಿ ಉದ್ದೇಶಕ್ಕೆ ಅನುಮೋದಿಸಿಕೊಂಡಿರುವ ನಿವೇಶನದಲ್ಲಿ ಇತರೇ ಉದ್ದೇಶಕ್ಕೆ ಅನುಮೋದನೆ ನೀಡಲು ಪರಿಗಣಿಸುವುದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗುವುದು ಎಂಬುದಾಗಿ ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ವಿಸ್ತೃತವಾದ ಚರ್ಚೆ ನಡೆದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರಿಂದ ಮಾರ್ಗದರ್ಶನ ಕೋರಿ ಮತ್ತೊಮ್ಮೆ ಪತ್ರ ಬರೆಯುವಂತೆ ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

ವಿಷಯ ಸಂಖ್ಯೆ: 06– ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು:–

(ಅ) – ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ, ಬೈಚನಹಳ್ಳಿ ಗ್ರಾಮದ ಸರ್ವೆ ನಂ. 80/2 ರ ಚಂದ್ರಶೇಖರ್ ಬಡಾವಣೆಯ 1078.08 ಚ.ಮೀ ವಿಸ್ತೀರ್ಣದ ನಾಗರೀಕ ಸೌಲಭ್ಯ ನಿವೇಶನದಲ್ಲಿ ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಿಸುವ ಬಗ್ಗೆ.

ನಿರ್ಣಯ:– ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ, ಬೈಚನಹಳ್ಳಿ ಗ್ರಾಮದ ಸ.ನಂ. 80/2 ರಲ್ಲಿ 1078.08 ಚ.ಮೀ ವಿಸ್ತೀರ್ಣದ ನಾಗರೀಕ ಸೌಲಭ್ಯ ನಿವೇಶನವನ್ನು ಪ್ರಾಧಿಕಾರಕ್ಕೆ ಕುಶಾಲನಗರ ಪಟ್ಟಣ ಪಂಚಾಯಿತಿಯಿಂದ ಪ್ರಾಧಿಕಾರದ ಹೆಸರಿಗೆ ಖಾತೆ (ನಮೂನೆ–3) ಯನ್ನು ನಮೂದಿಸಿ ದಾಖಲೆಗಳನ್ನು ನೀಡಿರುವುದರಿಂದ ಸದರಿ ನಿವೇಶನದಲ್ಲಿ ಸಾರ್ವಜನಿಕ ಹಿತಾದೃಷ್ಟಿಯಿಂದ ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಲು ಕಟ್ಟಡದ ಅಂದಾಜು ವೆಚ್ಚ ಪಟ್ಟಿಯನ್ನು ತಯಾರಿಸಿಕೊಡುವಂತೆ ಕೋರಿ ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವಂತೆ ಹಾಗೂ ಅಂದಾಜುಪಟ್ಟಿ ಪಡೆದ ನಂತರ ಕಟ್ಟಡ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯುವಂತೆ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

(ಆ) – ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 27 ರಲ್ಲಿನ 3.86 ಎಕರೆ ವಿಸ್ತೀರ್ಣದ ವಸತಿ ವಿನ್ಯಾಸ ನಕ್ಷೆಯಲ್ಲಿನ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ.

ನಿರ್ಣಯ:– ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಚರ್ಚಿಸಲಾಗಿ ಸ.ನಂ. 27 ರಲ್ಲಿನ 3.86 ಎಕರೆ ಜಮೀನಿಗೆ ಈ ಕಛೇರಿ ಆದೇಶ ಪತ್ರ ಸಂ: ಕುಯೋಪ್ರಾ/ಸಕಾ/ಸೋ.ತಾ/ಗುಮ್ಮನಕೊಲ್ಲಿ ಗ್ರಾಮ/ವಿ.ಅ/03/2015–16/136. ದಿನಾಂಕ 21–07–2015 ರಲ್ಲಿ ವಿನ್ಯಾಸ ಅನುಮೋದನೆ ಪಡೆದಿದ್ದು, ತದನಂತರ ಮೊದಲನೇ ಹಂತದ ಶೇಕಡಾ 40% ರಷ್ಟು ನಿವೇಶನಗಳನ್ನು ಈಗಾಗಲೇ ದಿನಾಂಕ: 26–08–2015 ರಲ್ಲಿ ಬಿಡುಗಡೆಗೊಳಿಸಿದ್ದು ಉಳಿಕೆ ಬಾಕಿ ಇರುವ ಎಲ್ಲಾ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮುಳ್ಳುಸೋಗೆ ಇವರ ಮೂಲಕ ಅರ್ಜಿದಾರರು ಪ್ರಸ್ತಾವನೆ ಸಲ್ಲಿಸಿದ್ದು ಜಮೀನಿನಲ್ಲಿ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಾದ ಕರ್ನಾಟಕ ನಗರ ನೀರು ಸರಬಾರಾಜು ಹಾಗೂ ಒಳಚರಂಡಿ ಮಂಡಳಿ, ತೋಟಗಾರಿಕೆ ಇಲಾಖೆ, ಚೆಸ್ಕಾಂ, ಲೋಕೋಪಯೋಗಿ ಇಲಾಖೆಗಳಿಂದ ಅರ್ಜಿದಾರರು ಕಾಮಗಾರಿ ಮುಕ್ತಾಯ ದೃಢೀಕರಣ ಪಡೆದು ಸಲ್ಲಿಸಿರುವುದರಿಂದ ವಿನ್ಯಾಸ ನಕ್ಷೆಯಲ್ಲಿ ಇರುವ 54 ನಿವೇಶನಗಳ ಪೈಕಿ ಬಿಡುಗಡೆಗೆ ಬಾಕಿ ಇರುವ 32 ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ